# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ ನಂ.733-2019** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರವಿಶಂಕರ್<br>ದೇಬೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 25-11-2023.** |

## ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಸಿ.ಎಂ.ಜೆ ವಕೀಲರಿಂದಃ

ಪಿರ್ಯಾದಿದಾರರ ತಂದೆಯವರ ಊರು ಹುಳಿಮಾವು. ಪಿರ್ಯಾದಿದಾರರು ತಾತನ ಹೆಸರು ಮಾದಪ್ಪ ಎಂದರೆ ನನಗೆ ಗೊತ್ತಿಲ್ಲ. ಮಾದಪ್ಪನವರಿಗೆ ಕೆಂಪಮ್ಮ ಎಂಬ ತಂಗಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೆಂಪಮ್ಮನವರು ನನ್ನ ಹೆಂಡತಿಯ ಮುತ್ತಜ್ಜಿಯಾಬೇಕು ಮತ್ತು ಮಾದಪ್ಪನವರಿಗೆ ದಾಯಾದಿ ತಂಗಿ ಆಗಬೇಕು ಎಂದು ನುಡಿಯುತ್ತಾರೆ. ಕೆಂಪಮ್ಮನವರು ಮಾದಪ್ಪನವರಿಗೆ ಸ್ವಂತ ತಂಗಿಯಾಗಿದ್ದರೂ ದಾಯಾದಿ ತಂಗಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಟರಾಜು ರವರ ತಂದೆ ಮಹದೇವಪ್ಪನವರನ್ನು ನೋಡಿರುವುದಿಲ್ಲ. ಪಿರ್ಯಾದಿದಾರರ ತಂದೆಯವರಾದ ಮಹದೇವಪ್ಪನವರು ನಂಜನಗೂಡಿನಲ್ಲಿ ವಾಸವಿದ್ದುದ್ದನ್ನು ನಾನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಹುಲ್ಲಹಳ್ಳಿ-ನಂಜನಗೂಡು ರಸ್ತೆಯಲ್ಲಿ ಪಿರ್ಯಾದಿದಾರರಿಗೆ ಸೇರಿದ ಅಕ್ಕಿ ಗಿರಣಿ ಇತ್ತು ಎಂದರೆ ಸಾಕ್ಷಿ ನನಗೆ ಪರಿಚಯವಾದಾಗ ಪಿರ್ಯಾದಿದಾರರಿಗೆ ಅಕ್ಕಿ ಗಿರಣಿ ಇರಲಿಲ್ಲ, ಅದು ಅವರ ಬಣ್ಣನ ಭಾಗಕ್ಕೆ ಸೇರಿತ್ತು ಎಂದು ನುಡಿಯುತ್ತಾರೆ. ಪಿರ್ಯಾದಿದಾರರು ನನಗೆ 2007 ರಿಂದ ಪರಿಚಿತರು. ಸಾಕ್ಷಿ ಮುಂದುವರೆದು ಪಿರ್ಯಾದಿದಾರರು ನನ್ನ ಪತ್ನಿಗೆ ಸಂಬಂಧಿಯಾಬೇಕು ಎಂದು ನುಡಿಯುತ್ತಾರೆ. ಅಕ್ಕಿ ಗಿರಣಿ ಪಿರ್ಯಾದಿದಾರರ ಅಣ್ಣನ ಭಾಗಕ್ಕೆ ಬಂದಿತ್ತು ಎಂಬುದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ, ಆದರೆ

ಪಿರ್ಯಾದಿದಾರರೇ ನನಗೆ ಸ್ವತಃ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಕ್ಕಿ ಗಿರಣಿಯೂ ಪಿರ್ಯಾದಿದಾರರ ಅಣ್ಣನವರಿಗೆ ಯಾರಿಂದ ಬಂತು ಎಂದು ನನಗೆ ತಿಳಿಸಿರುವುದಿಲ್ಲ. ಪಿರ್ಯಾದಿದಾರರ ತಂದೆಯವರ ಕಾಲದಿಂದಲೂ ಅಕ್ಕಿ ಗಿರಣಿಯನ್ನು ಪಿರ್ಯಾದಿದಾರರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಅಕ್ಕಿ ಗಿರಣಿಯನ್ನು ಪಿರ್ಯಾದಿದಾರರ ಅಣ್ಣ ನಡೆಸುತ್ತಿದ್ದಾರೆ ಎಂದು ಪಿರ್ಯಾದಿದಾರರ ನನಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪಿರ್ಯಾದಿದಾರರ ಅಕ್ಕಿ ಗಿರಣಿಯನ್ನು ತೋರಿಸಿದಾಗ ಸದರಿ ಅಕ್ಕಿ ಗಿರಣಿಯೂ ನಂಜನಗೂಡಿನ-ಹುಲ್ಲಹಳ್ಳಿ ರಸ್ತೆಯಲ್ಲಿ ಇತ್ತು ಎಂದರೆ ಸರಿ. ಅಕ್ಕಿ ಗಿರಣಿ ಇರುವ ಕಾಂಪೌಂಡ್ ಒಳಗಡೆಯೇ ಪಿರ್ಯಾದಿದಾರರು ಮತ್ತು ಅವರ ಅಣ್ಣನವರಿಗೆ ಸೇರಿದ ಮನೆ ಇರುತ್ತದೆ  ಎಂಬ ಪ್ರಶ್ನೆಗೆ ಸಾಕ್ಷಿ ಮನೆ ಇದ್ದು ಮನೆಗಳು ಇದ್ದು ಮಧ್ಯೆ ಗೋಡೆ ಇರುತ್ತದೆ, ಆ ಭಾಗದಲ್ಲಿ ನನ್ನ ಅತ್ತಿಗೆಯವರು ವಾಸವಿದ್ದು ನಾನು ಅವರು ಮಾತನಾಡುವುದಿಲ್ಲ ಎಂದು ಪಿರ್ಯಾದಿದಾರರೇ ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪಿರ್ಯಾದಿದಾರರ ಅಣ್ಣನ ಮಗ ಆತ್ಮಹತ್ಯೆ ಮಾಡಿಕೊಂಡಿದ್ದು ಆ ಸಮಯ ನಾನು ಸಹ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರ ಕುಟುಂಬದ ಒಡನಾಡಿ ಹಾಗೂ ಸ್ನೇಹಿತ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಪಿರ್ಯಾದಿದಾರರಿಗೆ ದೂರದ ಸಂಬಂಧಿಯಾಬೇಕು ಎಂದು ನುಡಿಯುತ್ತಾರೆ. ಪಿರ್ಯಾದಿದಾರರ ಅತ್ತಿಗೆಯೂ ಸಹ ನನ್ನ ಹೆಂಡತಿ ಕಡೆಯಿಂದ ಸಂಬಂಧಿಯಾಬೇಕು.

2. ನನ್ನ ತಂದೆ ಬಸವಪುರದ ಪುಟ್ಟಣ್ಣ ಎಂದರೆ ಸರಿ. ನನ್ನ ತಂದೆಯವರು ಜಮೀನ್ದಾರರು ಎಂದರೆ ಸರಿ. ನನ್ನ ತಂದೆಯವರು ಹೆಚ್ಚಾಗಿ ಭತ್ತ ಬೆಳೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರು ಬೆಳೆದ ಭತ್ತವನ್ನು ಮಹದೇಪ್ಪ ಮತ್ತು ಪಿರ್ಯಾದಿದಾರರು ಅಕ್ಕಿ ಗಿರಣಿಗೆ ಹಾಕುತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಡಜಟ್ಟಿ ಮುದ್ದಪ್ಪನವರ ಅಕ್ಕಿ ಗಿರಣಿಗೆ ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ಆ ಕಾಲಕ್ಕೆ ಆ ರಸ್ತೆಯಲ್ಲಿ  ಮಹದೇಪ್ಪ ಮತ್ತು ಮುದ್ದಪ್ಪನವರ ಅಕ್ಕಿ ಗಿರಣಿಗಳು ಮಾತ್ರ ಇದ್ದವು ಎಂದರೆ ನನೆಗೆ ಗೊತ್ತಿಲ್ಲ. ಅಕ್ಕಿ ಗಿರಣಿಯೊಂದಿಗೆ ಎಣ್ಣೆ ಗಿರಣಿಯೂ ಇತ್ತು ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರರ ಕುಟುಂಬದವರನ್ನು ಬಹಳ ಹಿಂದಿನಿಂದಲೂ ಹುಳಿಮಾವು ಸಾಹುಕಾರರು ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಪಿರ್ಯಾದಿದಾರರ ಕುಟುಂಬದವರು ಅಕ್ಕಿ ಮತ್ತು ಎಣ್ಣೆಯನ್ನು ಕೇರಳಕ್ಕೆ ಕಳುಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿದಾರರ ಕುಟುಂಬವು ಅವರ ತಂದೆಯ ಕಾಲದಿಂದಲೂ ಸಹ ವ್ಯಾಪಾರಸ್ಥರ ಕುಟುಂಬ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಕಪಿಲಾ ಫೈನಾನ್ಸ್ ಎಂಬ ನಾಮಾಂಕಿತದಲ್ಲಿ ಫೈನಾನ್ಸ್ ವ್ಯವಹಾರ ಮಾಡುತ್ತಿದ್ದು ಇದರೊಂದಿಗೆ ಕೇರಳಕ್ಕೆ ಭತ್ತವನ್ನು ಕಳುಹಿಸುತ್ತಿದ್ದರು. ಆ ಸಮಯ ನಾನು ಚಿಕ್ಕವನಾದ್ದರಿಂದ ಎಷ್ಟು ಭತ್ತವನ್ನು ಕಳುಹಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅಕ್ಕಿ ಗಿರಣಿ ಮತ್ತು ಎಣ್ಣೆ ಗಿರಣಿಯೂ ಸುಮಾರು ಮಕ್ಕಾಲು ಎಕರೆ ವಿಸ್ತೀರ್ಣದಲ್ಲಿ ಇರುತ್ತದೆ ಎಂದರೆ ನನೆಗೆ ಗೊತ್ತಿಲ್ಲ. ಹುಲ್ಲಹಳ್ಳಿ ರಸ್ತೆಯಲ್ಲಿ ಇರುವ ಮಹಾಲಕ್ಷ್ಮೀ ಕಾಂಪ್ಲೆಕ್ಸ್ ನನಗೆ ಸೇರಿದ್ದಾಗಿರತ್ತದೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿನ ಕಟ್ಟಡವು ಯಾರದ್ದು ಎಂದು ಕೇಳಲಾಗಿ ಸಾಕ್ಷಿ ತನ್ನದೇ ಎಂದು ಒಪ್ಪಿಕೊಂಡಿದ್ದು ಸದರಿ ಪೋಟೋವನ್ನು ನಿಪಿ–8 ಎಂದು ಗುರುತಿಸಲಾಯಿತು. ಸದರಿ ನಿಪಿ–8 ರಲ್ಲಿ ಕಾಣುತ್ತಿರುವ ಕಟ್ಟಡವನ್ನು 2009 ರಿಂದ ಸ್ವಲ್ಪ ಸ್ವಲ್ಪ ಕಟ್ಟಿಕೊಂಡು ಬಂದಿರುತ್ತೇನೆ. ಇನ್ನೂ ಸದರಿ ಕಟ್ಟಡದ ಕೆಲಸ ಬಾಕಿ ಇರುತ್ತದೆ. ನಿಪಿ–8 ರಲ್ಲಿ ಕಾಣುತ್ತಿರುವ ಕಟ್ಟಡದ ಅಂಗಡಿ ಮಳಿಗೆ ಮತ್ತು ಮನೆಗಳನ್ನು ಬಾಡಿಗೆಗೆ ನೀಡಿರುತ್ತೇನೆ ಎಂದರೆ ಸಾಕ್ಷಿ ಒಂದು ಅಂಗಡಿಯನ್ನು ಬಾಡಿಗೆಗೆ ನೀಡಿದ್ದು ಮತ್ತೊಂದು ಅಂಗಡಿ ಖಾಲಿ ಇದ್ದು 15 ರೂಮುಗಳನ್ನು ಬಾಡಿಗೆಗೆ ನೀಡಿದ್ದು ಉಳಿದ ರೂಮುಗಳು ಖಾಲಿ ಇರುತ್ತವೆ ಎಂದು ನುಡಿಯುತ್ತಾರೆ. ಮಹಾಲಕ್ಷ್ಮೀ ಕಾಂಪ್ಲೆಕ್ಸ್ ನಿಪಿ–8 ರಲ್ಲಿರುವ ಕಟ್ಟಡವನ್ನು ರೆಪ್ಕೋ ಹೋಂ ಫೈನಾನ್ಸ್ ನಿಂದ ಸಾಲ ಪಡೆದು ಕಟ್ಟಲಾಗಿರುತ್ತದೆ ಎಂದರೆ ಸರಿ. ಸದರಿ ಸಾಲವನ್ನು ನನ್ನ ಮತ್ತು ನನ್ನ ಪತ್ನಿ ಹೆಸರಿನಲ್ಲಿ 2009 ರಿಂದ ಹಂತ–ಹಂತವಾಗಿ ಪಡೆಯಲಾಗಿರುತ್ತದೆ.

3. ಸಾಕ್ಷಿಗೆ ಮತ್ತೊಂದು ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಕಾಣುತ್ತಿರುವ ಮಹೇಶ್ ಕಾಂಪ್ಲೆಕ್ಸ್ ಪಿರ್ಯಾದಿದಾರರಿಗೆ ಸೇರಿದ್ದಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಪೋಟೋವನ್ನು ನಿಪಿ–9 ಎಂದು ಗುರುತಿಸಲಾಯಿತು. ಸದರಿ ನಿಪಿ–9 ರಲ್ಲಿ ಕಾಣುತ್ತಿರುವ ಮಹೇಶ್ ಕಾಂಪ್ಲೆಕ್ಸ್ ನ ಒಳಗಡೆಯೂ ಸಹ ಪಿರ್ಯಾದಿದಾರರು ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಹೇಶ್ ಕಾಂಪ್ಲೆಕ್ಸ್ ನ ಒಳಗಡೆ ಇರುವ ಅಂಗಡಿ, ಗೋಡೌನ್ ಮತ್ತು ಮನೆಗಳನ್ನು ಬಾಡಿಗೆಗೆ

ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೊನೆಯ ಬಾರಿಗೆ ಮಹೇಶ್ ಕಾಂಪ್ಲೆಕ್ಸ್ ಬಳಿ ಯಾವಾಗ ಹೋಗಿದ್ದೆನು ಎಂದು ನನಗೆ ಗೊತ್ತಿಲ್ಲ. ನಿಪಿ–8 ಮತ್ತು 9 ರಲ್ಲಿರುವ ಕಟ್ಟಡಗಳು 200 ಮೀಟರ್ ಅಂತರ ಇದ್ದು, ಎದುರು–ಬದುರು ಇರುತ್ತದೆ. ಪಿರ್ಯಾದಿದಾರರ ತನಗೆ ಸೇರಿದ ಕಟ್ಟಡವನ್ನು ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಶ್ರೀ ಮಂಜುನಾಥೇಶ್ವರ ಗ್ರಾಮೋದ್ಯೋಗ ಬ್ಯಾಂಕಿಗೆ ಬಾಡಿಗೆಗೆ ನೀಡಿದ್ದರು ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ಪಿರ್ಯಾದಿದಾರರು ಪರ ವಕೀಲರು, ಸಮಯವನ್ನು ಕೋರಿದ್ದು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**